**ಪ್ರಧಾನ ಸಿವಿಲ್ ನ್ಯಾಯಾಧೀಶರು  ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ ಮೂಡಿಗೆರೆ**

**ಸಿ.ಸಿ.ನಂಬರ್ಃ1735/2023**

ಸಿಡಬ್ಲ್ಯೂಃ 1
ಪಿಡಬ್ಲ್ಯೂಃ 4

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀನಾಥ ರೆಡ್ಡಿ ವಿ. |
| ತಂದೆಯ ಹೆಸರು | : | ವೆಂಕಟಸ್ವಾಮಿ ರೆಡ್ಡಿ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಪಿ.ಎಸ್.ಐ., ಮೂಡಿಗೆರೆ  ಪೊಲೀಸ್ ಠಾಣೆ |
| ವಾಸಸ್ಥಳ | : | ಮೂಡಿಗೆರೆ |

ಇಂದು ದಿನಾಂಕಃ01.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

1. ನಾನು  ದಿನಾಂಕಃ15.06.2023 ರಿಂದ 31.01.2024 ರವರೆಗೆ ಬಾಳೂರು ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಎಂದು ಕರ್ತವ್ಯ ನಿರ್ವಹಿಸಿದ್ದೆ.

2. ದಿನಾಂಕಃ10.07.2023 ರಂದು ರಾತ್ರಿ 12 ಗಂಟೆಗೆ ಜಾವಳಿ ಗ್ರಾಮದ ಬಸ್ ನಿಲ್ದಾಣದಲ್ಲಿ ಅಶೋಕ್ ಲೇಲ್ಯಾಂಡ್ ಗೂಡ್ಸ ವಾಹನವನ್ನು ನಿಲ್ಲಿಸಿಕೊಂಡು, ಕೆಲವು ವ್ಯಕ್ತಿಗಳು, ದನಗಳನ್ನು ಕಳ್ಳತನ ಮಾಡುತ್ತಿರುವ ಬಗ್ಗೆ ಬಾತ್ಮಿ ಬಂದಿರುತ್ತದೆ. ಅದರದ ಆದಾರದ ಮೇಲೆ ಠಾಣೆಗೆ ಬಂದು, ಠಾಣೆಯಲ್ಲಿ ಹಾಜರಿದ್ದ, ಚಾಸಾ-6 ರಿಂದ 8 ರವರಿಗೆ ಮಾಹಿತಿ ವಿಚಾರವನ್ನು ತಿಳಿಸಿ, ನನ್ನೊಂದಿಗೆ ಅವರನ್ನು ಕರೆದುಕೊಂಡು, ನಮ್ಮ ಇಲಾಖಾ ವಾಹನದಲ್ಲಿ, ರಾತ್ರಿ 12.10 ಗಂಟೆಗೆ ಠಾಣೆಯಿಂದ ಹೊರಟು, 12.30 ಗಂಟೆಗೆ ಜಾವಳಿ ಗ್ರಾಮವನ್ನು ತಲುಪಿರುತ್ತೇವೆ. ಆ ಕಾಲಕ್ಕೆ ಅಲ್ಲಿಯೇ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಚಾಸಾ-2 ಮತ್ತು 3 ರವರಿಗೆ ಬಾತ್ಮಿ ವಿಚಾರ ತಿಳಿಸಿ ಪಂಚರಾಗಿ ನೇಮಕ ಮಾಡಿಕೊಂಡಿರುತ್ತೇವೆ. ನಂತರ ನಾವೆಲ್ಲರೂ ಸೇರಿ, 12.45 ಗಂಟೆಗ ಜಾವಳಿ ಬಸ್ ನಿಲ್ದಾಣದ ಹತ್ತಿರ ಹೋಗಿ ನೋಡಲಾಗಿ, ಅಂಚೆ ಕಚೇರಿಯ ಮುಂಭಾಗದ ರಸ್ತೆಯಲ್ಲಿ ಒಂದು ಅಶೋಕ್ ಲೇಲಾಂಡ್ ವಾಹನ ನಿಲ್ಲಿಸಿರುವುದು ಕಂಡುಬಂದಿರುತ್ತದೆ. ಅಲ್ಲಿಯೇ ಸುಮಾರು 4 ರಿಂದ 5 ಕಪ್ಪು, ಕಂದು ಮಿಶ್ರಿತ ದನಗಳು ಇದ್ದು, ಒಂದು ದನವನ್ನು 3 ಜನರು ವಾಹನಕ್ಕೆ ತುಂಬುತ್ತಿರುವುದು ಕಂಡುಬಂದಿರುತ್ತದೆ. ನಂತರ ನಾವೆಲ್ಲರೂ ದಾಳಿ ಮಾಡಿ, ಸದರಿ 3 ವ್ಯಕ್ತಿಗಳನ್ನು ಹಿಡಿದಿದ್ದು , ಅವರನ್ನು ವಿಚಾರಿಸಲಾಗಿ ಸದರಿರವರು ತಮ್ಮ ಹೆಸರು ಮತ್ತು ವಿಳಾಸವನ್ನು ತಿಳಿಸಿರುತ್ತಾರೆ. ನಂತರ ವಿಚಾರಿಸಲಾಗಿ, ಸದರಿ ದನಗಳು ರಸ್ತೆಯ ಪಕ್ಕದಲ್ಲಿ ಮಲಗಿದ್ದು ಅವುಗಳನ್ನು ಕಳ್ಳತನದಿಂದ ಕದ್ದು ಸಾಗಾಣಿಕೆ ಮಾಡಿಕೊಂಡು, ಸಂತೆಯಲ್ಲಿ ಮಾರಾಟ ಮಾಡಿ ಲಾಭಗಳಿಸುವ ಉದ್ದೇಶದಿಂದ ವಾಹನಕ್ಕೆ

ತುಂಬುತ್ತಿರುವುದಾಗಿ ತಿಳಿಸಿರುತ್ತಾರೆ. ನಂತರ ಚಾಸಾ-4 ಮತ್ತು 5 ರವರನ್ನು ಸದರಿ ದನಗಳ ಬಗ್ಗೆ ವಿಚಾರಿಸಲಾಗಿ, ಅವುಗಳು ಬಿಡಾಡಿ ದನಗಳು ಎಂದು, ಜಾವಳಿ ಬಸ್ ನಿಲ್ದಾಣದ ಪಕ್ಕದಲ್ಲಿಯೇ ಮಲಗಿರುತ್ತವೆ ಎಂದು ತಿಳಿಸಿರುತ್ತಾರೆ. ತದನಂತರ ಪಂಚರ ಸಮಕ್ಷಮ ವಾಹನವನ್ನು ಪರಿಶೀಲಿಸಲಾಗಿ ಅದರ ವಾಹನ ನೋಂದಣಿ ಸಂ.ಕೆಎ-13-9436 ಎಂದು ಇದ್ದು ಹಳದಿ ನಂಬರ್ ಪ್ಲೇಟ್ ಹೊಂದಿತ್ತು. ನಂತರ ವಾಹನವು ಕ್ರೀಮ್ ಕಲರ್ ನ ವಾಹನವಾಗಿದ್ದು, ಹಿಂಬದಿಯಲ್ಲಿ ಒಂದು ಕಪ್ಪು ಬಣ್ಣದ ಹೋರಿ ಹಾಗೂ ಕಂದು ಬಣ್ಣದ ಹಸು ಕಂಡುಬಂದಿರುತ್ತವೆ. ಸದರಿ ಹಸುಗಳನ್ನು ಕಟ್ಟಲು ಉಪಯೋಗಿಸಿದ ಹಗ್ಗಗಳು ಸಹ ಕಂಡುಬಂದಿರುತ್ತವೆ. ನಂತರ ವಾಹನ, ಆರೋಪಿತರು, ಹಸುಗಳು, ಹಗ್ಗಗಳನ್ನು ಪಂಚರ ಸಮಕ್ಷಮ ನಿಯಮಾನುಸಾರ ಜಪ್ತು ಮಾಡಿಕೊಂಡು, ಮಧ್ಯ ರಾತ್ರಿ 1 ಗಂಟೆಯಿಂದ 2.30 ರ ಅವದಿಯಲ್ಲಿ ಮಹಜರು ಮಾಡಿ, ಫೋಟೋಗಳನ್ನು ತೆಗೆದಿರುತ್ತೇನೆ. ಆ ಕಾಲಕ್ಕೆ ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ಸಹ ತಯಾರಿಸಿರುತ್ತೇನೆ. ತದನಂತರ 2.45 ಗಂಟೆಗೆ ಠಾಣೆಗೆ ಹಾಜರಾಗಿ, ಮುಂದಿನ ಕ್ರಮಕ್ಕೆ ಎಸ್.ಹೆಚ್.ಓ ರವರಿಗೆ ಸರ್ಕಾರಿ ತರ್ಫೆ ದೂರು, ಮುದ್ದೆಮಾಲುಗಳು ಮತ್ತು ಆರೋಪಿತರನ್ನು ಅವರ ವಶಕ್ಕೆ ನೀಡಿರುತ್ತೇನೆ.

3. ಸಾಕ್ಷಿಯು ತಾವು ನೀಡಿದ ದೂರು, ಪ್ರಥಮ ವರ್ತಮಾನ ವರದಿ ಮತ್ತು ಮಹಜರು ಹಾಗೂ ಅವುಗಳ ಮೇಲಿನ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ, ಸದರಿ ದಾಖಲೆಗಳನ್ನು ನಿಪಿ-1 ರಿಂದ 3 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1 ಎ ಯಿಂದ 3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-8 ಫೋಟೋಗಳನ್ನು ನೋಡಿ ಗುರುತಿಸಿ, ಅವುಗಳನ್ನು ಮಹಜರು ಕಾಲಕ್ಕೆ ಮತ್ತು ಪೊಲೀಸ್ ಠಾಣೆಯಲ್ಲಿ ತೆಗೆಯಲಾದ ಫೋಟೋಗಳು ಎಂದು ನುಡಿದ ಕಾರಣ, ಸದರಿ ಫೋಟೋಗಳನ್ನು ನಿಪಿ-4 ರಿಂದ 11 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಒಂದು ಬಿಳಿ ಚೀಲ ಮತ್ತು ಅದರಲ್ಲಿನ ಎರಡು ಹಗ್ಗಗಳನ್ನು ನೋಡಿ ಗುರುತಿಸಿದ್ದು, ಅವುಳನ್ನು ಕ್ರಮವಾಗಿ ಎಂಒ-1 ರಿಂದ 3 ಹಾಗೂ ಸಾಕ್ಷಿಯ ಸಹಿಗಳನ್ನು ಎಂಒ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿದ್ದ ಆರೋಪಿತರನ್ನು ನೋಡಿ ಗುರುತಿಸಿ, ಆ ದಿನ ದನಗಳನ್ನು ಸಾಗಾಟ ಮಾಡುತ್ತಿದ್ದ ವ್ಯಕ್ತಿಗಳು ಇವರೇ ಎಂದು ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ</u> ಆರೋಪಿತರ ಪರ ಶ್ರೀ ಹೆಚ್.ಕೆ.ಡಿ. ವಕೀಲರಿಂದಃ

4. ದಿನಾಂಕ.10.07.2023 ರಂದು ನಾನು ಠಾಣೆಗೆ ಬಂದಾಗ ರಾತ್ರಿ 12.05 ಗಂಟೆಯಾಗಿತ್ತು. ಠಾಣೆಯಿಂದ ಸ್ಥಳಕ್ಕೆ ಹೊರಡುವಾಗ 12.10 ಗಂಟೆಯಾಗಿತ್ತು. ಒಟ್ಟು ನಾವು 4 ಜನ

ದಾಳಿಗೆ ಹೋಗಿರುತ್ತೇವೆ. ಪಂಚರು ಜಾವಳಿ ಗ್ರಾಮದ ಪ್ರವೇಶದಲ್ಲಿ ಸಿಕ್ಕಿರುತ್ತಾರೆ. ಅವರಿಗೆ ನೋಟಿಸು ಜಾರಿ ಮಾಡಿ 10 ನಿಮಿಷ ಕಾಲಾವಕಾಶ ತೆಗೆದುಕೊಂಡಿರುತ್ತೇವೆ. ಅಂಚೆ ಕಚೇರಿಯ ಮುಂಭಾಗದ ನಿಂತಿದ್ದ ಗೂಡ್ಸ್ ವಾಹನ ಪೂರ್ವಕ್ಕೆ ಮುಖ ಮಾಡಿ ನಿಂತಿತ್ತು. ಆ ದಿನ ಆರೋಪಿತರನ್ನು ಹೊರತುಪಡಿಸಿ, ಚಾಸಾ-4 ಮತ್ತು 5 ರವರೂ ಸಹ ಸ್ಥಳದಲ್ಲಿ ಇದ್ದರು. ಆರೋಪಿತರನ್ನು ದನ ತುಂಬಿಸುವುದನ್ನು ಸುಮಾರು 10 ಮೀಟರ್ ದೂರದಿಂದ ನೋಡಿರುತ್ತೆನೆ. ಆ ಸಮಯದಲ್ಲಿ ಫೋಟೋಗಳನ್ನು ತೆಗೆದಿಲ್ಲ. ಆರೋಪಿತರನ್ನು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿರುತ್ತಾರೆ. ಎಷ್ಟು ದೂರ ಓಡಿ ಹೋದರು ಎಂದರೆ ಸಾಕ್ಷಿಯು ಓಡಲು ಪ್ರಯತ್ನಿಸಿದ ಕೂಡಲೇ ನಾವು ಹಿಡಿದಿದ್ದೇವೆ ಎಂದು ನುಡಿಯುತ್ತಾರೆ. ಆರೋಪಿತರನ್ನು ಹಿಡಿಯಲು ಹೋದಾಗ ಗೂಡ್ಸ ವಾಹನದಲ್ಲಿ ಎರಡು ದನಗಳು ಇದ್ದವು. ಅವುಗಳ ವಯಸ್ಸು ಎಷ್ಟು ವಯಸ್ಸಾಗಿತು ಎಂದು ನನಗೆ ಈಗ ನೆನಪಿಲ್ಲ.

2. ದನಗಳು ಸಾಮಾನ್ಯವಾಗಿ ನಾಲ್ಕುವರೆಯಿಂದ 5 ಅಡಿ ಉದ್ದವಿರುತ್ತವೆ ಎಂದರೆ ಸಾಕ್ಷಿಯು ಮಲೆನಾಡು ಗಿಡ ಜಾತಿಯ ದನಗಳು ಅಷ್ಟು ಎತ್ತರ ಇರುವುದಿಲ್ಲ ಎಂದು ನುಡಿಯುತ್ತಾರೆ. ದನಗಳು ಸಾಮಾನ್ಯವಾಗಿ ಒಂದರಿಂದ ಒಂದೂವರೆ ಕ್ವಿಂಟಾಲ್ ತೂಕ ಇರುತ್ತವೆ ಎಂದರೆ ಇರಬಹುದು. ದನಗಳನ್ನು ವಾಹನಕ್ಕೆ ಹತ್ತಿಸಲು ಸಲಕರಣೆಗಳು ಇದ್ದ ಬಗ್ಗೆ ಆ ದಿನ ನಮಗೆ ಕಂಡುಬಂದಿಲ್ಲ. ಅಂಚೆ ಕಚೇರಿಯ ಮುಂದೆ ಮತ್ತು ಜಾವಳಿ ಬಸ್ ಸ್ಟಾಂಡ್ ಮಧ್ಯದಲ್ಲಿ ಸಮತಟ್ಟಾದ ಜಾಗ ಇದೆ ಎಂದರೆ ಸರಿ. ಪಂಚರನ್ನು ಹೊರತುಪಡಿಸಿ ಇಬ್ಬರು ಪ್ರತ್ಯಕ್ಷ ಸಾಕ್ಷಿದಾರರನ್ನು ನಾನು ವಿಚಾರಿಸಿರುತ್ತೇನೆ. ಅವರ ಹೆಸರು ಮತ್ತು ವಿಳಾಸವನ್ನು ಮಹಜರಿನಲ್ಲಿ ಹೇಳಿರುತ್ತೇನೆ. ಜಾವಳಿಯ ಅಕ್ಕಪಕ್ಕ ಆಸ್ಪತ್ರೆ, ಹಾಸ್ಟೆಲ್, ಕೆನರಾ ಬ್ಯಾಂಕ್ ಗಳು ಇವೆ ಎಂದರೆ ಸರಿ. ಬ್ಯಾಂಕಿನಲ್ಲಿ ಸಿ.ಸಿ. ಕ್ಯಾಮೇರಾ ಅಳವಡಿಸಿದ್ದಾರೆ ಎಂದರೆ ಸಾಕ್ಷಿಯು ಬ್ಯಾಂಕಿನ ಒಳಭಾಗದಲ್ಲಿ ಅಳವಡಿಸಿರಬಹುದು ಎಂದು ನುಡಿಯುತ್ತಾರೆ. ಎಂಒ-2 ಮತ್ತು 3 ಹಗ್ಗಗಳ ಉದ್ದವನ್ನು ಅಳತೆ ಮಾಡಿಲ್ಲ. ಆದರೆ ಅಂದಾಜು ಉದ್ದವನ್ನು ಮಹಜರಿನಲ್ಲಿ ನಮೂದಿಸಿರುತ್ತೇವೆ.

3. ಫೋಟೋಗಳನ್ನು ಯಾರು, ಯಾವುದರ ಸಹಾಯದಿಂದ ತೆಗೆದರು ಎಂದು ನನಗೆ ಹೇಳಲು ಆಗುವುದಿಲ್ಲ. ಪಂಚನಾಮೆಯನ್ನು ಜರುಗಿಸಿ ಠಾಣೆಗೆ ಬರಲು 2.45 ಗಂಟೆಯಾಗಿತ್ತು. ಪಂಚನಾಮೆಯನ್ನು ಚಾಸಾ-6 ಬರೆದಿರುತ್ತಾರೆ. ಘಟನಾ ಸ್ಥಳದ ಚಕ್ಕುಬಂದಿ ಪೂರ್ವಕ್ಕೆ ಬಾಳೂರಿಗೆ ಬರುವ ರಸ್ತೆ, ಪಶ್ಚಿಮಕ್ಕೆ ಹೊರನಾಡಿಗೆ ಹೋಗುವ ರಸ್ತೆ, ಉತ್ತರಕ್ಕೆ ಅಂಚೆ ಕಚೇರಿ, ದಕ್ಷಿಣಕ್ಕೆ ನಾಗರೀಕ ಸೇವಾ ಕೇಂದ್ರ ಬರುತ್ತದೆ. ಫೋಟೋವನ್ನು ತೆಗೆಯುವಾಗ ನಾನು ಮತ್ತು ನನ್ನ ಸಿಬ್ಬಂದಿಗಳು ನಿಂತು ಫೋಟೋ ತೆಗೆದ ಬಗ್ಗೆ ನನಗೆ ನೆನಪಿಲ್ಲ. ನಾವು ಜಾವಳಿಗೆ ಹೋಗಿ, ಆರೋಪಿತರ ಮೇಲೆ ದಾಳಿ ಮಾಡಿರುತ್ತೇವೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಅವರುಗಳಿಂದ ಎರಡು ದನಗಳು ಮತ್ತು

ವಾಹನವನ್ನು ಜಪ್ತು ಮಾಡಿಕೊಂಡು, ಮಹಜರು ಬರೆದಿರುತ್ತೇವೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇವೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಮಹಜರನ್ನು ಠಾಣೆಯಲ್ಲಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

4. ಜಾವಳಿ ಭಾಗದಲ್ಲಿ ದನಗಳು ಕಳ್ಳತನವಾಗಿರುವ ಬಗ್ಗೆ ನಂತರದಲ್ಲಿ ಯಾರು ಸಹ ನನಗೆ ದೂರನ್ನು ನೀಡಿದ ಬಗ್ಗೆ ನನಗೆ ನೆನಪಿಲ್ಲ. ನಮ್ಮ ಠಾಣೆಯ ಅಂಕಿಅಂಶಗಳಿಗೋಸ್ಕರ, ನಾನು ಸುಳ್ಳು ಪ್ರಕರಣವನ್ನು ದಾಖಲಿಸಿ, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ